(೨) ವಿಧಾನ ಸಭಾ ಸದಸ್ಯರಾದ ಶ್ರೀ ಟಿ.ಎಸ್. ಮಣಿಯವರನ್ನು ಕರ್ನಾಟಕ ಪೋಲೀಸ್ ಕಾಯ್ದೆಯ ೭೧ನೇ ಕಲಮಿನ ಮೇರೆಗೆ ಬಂಗಾರಪೇಟೆಯಲ್ಲಿ ದಿನಾಂಕ ೨೬ನೇ ಫೆಬ್ರುವರಿ, ೧೯೭೬ರಂದು ಬಂಧಿಸಿ ಬಂಗಾರಪೇಟೆಯಲ್ಲಿನ ರೈಲ್ವೆ ಪೋಲೀಸ್ ಠಾಣೆಯಲ್ಲಿಟ್ಟುಕೊಂಡು ಅದೇ ದಿನ ಬಿಡುಗಡೆ ಮಾಡಲಾಯಿತು.

ನಿಲುವಳಿ ಸೂಚನೆ

ಭಾರತ್ ಬಂದ್ ಬಗ್ಗೆ (ಅನುಮತಿಗೆ ಮನವಿ)

ಶ್ರೀ ಕೆ. ಹೆಚ್. ಪಾಟೀಲ್.—ಸಭಾಧ್ಯಕ್ಷರೇ, ನಾವು ಈಗಾಗಲೇ ೨೬-೨-೧೯೭೬ನೇ ಇಸವಿಯ ದಿವಸ ಜರುಗಿದಂಥ ರಾಜ್ಯ ಸರ್ಕಾರದ ನೇರ ಬೆಂಬಲದಿಂದ ಭಾರತ್ ಬಂದ್ ಕಾರ್ಯಕ್ರಮದಿಂದ ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆಯಿಂದ ಹಾಗೂ ಇನ್ನು ಳಿದ ವಿಷಯಗಳನ್ನು ಚರ್ಚಿಸಲಿಕ್ಕೆ ಸದನದಲ್ಲಿ ಚರ್ಚೆ ಮಾಡಲು ಈ ಸೂಚನೆಯನ್ನು ನೀಡುತ್ತೇನೆ. ಈ ಬಗ್ಗೆ ನಿಯಮವನ್ನು ವಿಾರುವುದು ಬೇಡ ಎಂದು ತಾವು ಬಹಳ ಕಳಕಳಿಯಿಂದ ಹೇಳಿದ್ದೀರಿ. ಪ್ರಶ್ನೋತ್ತರ ವೇಳೆಯನಂತರ ಈ ವಿಷಯವನ್ನು ತೆಗೆದುಕೊಳ್ಳೋಣ ಎಂದು ಹೇಳಿದ್ದೀರಿ. ನಿಜ. ಆದರೆ ಎಲ್ಲಾ ನಿಯಮಗಳನ್ನು ಅನುಸರಿಸಿ ತಮಗೆ ಸಮಾಧಾನವಾಗುವ ರೀತಿಯಲ್ಲಿ ನಿಲುವಳಿ ಸೂಚನೆಯನ್ನು ಈ ಸಭೆ ಸೇರುವುದಕ್ಕೆ ಮೊದಲು ಕೊಟ್ಟಿದ್ದೆ. ಈ ನಿಲುವಳಿ ಸೂಚನೆಗೆ ನಿರ್ದಿಷ್ಟವಾದ ಹಿನ್ನೆಲೆಯನ್ನು ತಾವು ಮತ್ತು ಜನತೆಯು ಅರಿಯುವುದು ಅತ್ಯಂತ ಅವಶ್ಯಕ. ಇದರಲ್ಲಿ ಯಾವುದೇ ರೀತಿಯ ಒಂದು ಬಂದ್ ಆದರೆ ಈ ನಿಲುವಳಿ ಸೂಚನೆಯನ್ನು ತರಲಿಕ್ಕೆ ಇಷ್ಟೆ ಪಟ್ಟದ್ದಲ್ಲ. ಇದರಲ್ಲಿ ವಿಶೇಷವೇನಾಗಿದೆ ಎಂದರೆ, ಸರ್ಕಾರವೇ ಕುಳಿತು ಈ ಬಂದ್‌ನ್ನು ಮಾಡಿಸಿರುವುದು. ಮಾನ್ಯ ಕೃಷ್ಣನ್‌ರವರು ಬಂದ್‌ನ ವಿಷಯವಾಗಿ ಅನೇಕ ಸಲ ಮಾತನಾಡುತ್ತಾರೆ. ಅದಕ್ಕೆ ನನ್ನ ಆಕ್ಷೇಪಣೆ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಇದನ್ನು ನಾವೇ ಮಾಡಿದ್ದು.

ಶ್ರೀ ಕೆ. ಹೆಚ್. ಪಾಟೀಲ್—ನೀವು ಮಾಡಿದ್ದಕ್ಕೆ ಆಕ್ಷೇಪಣೆ ಇಲ್ಲ. ನಾನು ನಿನ್ನೆ ದಿವಸ ನೋಡಲಿಕ್ಕೆ ಊರಿನ ಕಡೆಗೆ ಹೋದೆ. ಅಗ್ರಿಕಲ್ಚರಲ್ ಯೂನಿವರ್ಸಿಟಿಯ ಹತ್ತಿರ ಹೆಬ್ಬಾಳದಲ್ಲಿ ಪೋಲೀಸ್ ಅಧಿಕಾರಿಗಳು ಪೋಲೀಸ್ ಡ್ರೆಸ್‌ನಿಂದ ಹೊಗಿ ಪೆಟ್ರೋಲ್ ಬಂಕನ್ನು ಬಂದ್ ಮಾಡ್ರಿ ಎಂದು ಹೇಳುತ್ತಿದ್ದರು. ಈ ದೃಷ್ಟಿಯಿಂದ ಮತ್ತು ಇಲ್ಲಿ ಬಂದು ನಾವು ಆಫೀಸಿಗೆ ಬಂದಾಗ ಇಲ್ಲಿ ಅನೇಕ ಕಛೇರಿಗಳು ಮುಚ್ಚಿದ್ದವು. ಕೇಂದ್ರ ಸರ್ಕಾರವೆ ಎಲ್ಲಾ ಕಛೇರಿಗಳು ತೆಗೆದಿದ್ದವು. ಇಲ್ಲಿ ಸರ್ಕಾರ ನೇರವಾದ ಉದ್ದೇಶದಿಂದ ಪ್ರಚೋದನೆ ಮಾಡುವಂಥ ಕಾರ್ಯ ನಡೆದಿರುವುದರಿಂದ ಜನತೆ ಕಂಗಾಲಾಗಿದ್ದಾರೆ. ಶಾಸಕರ ಭವನ ತಮ್ಮ ಕಸ್ಟೋಡಿಯಲ್ಲಿದ್ದರೂ ಎಂ ಎಲ್ ಎ. ಗಳು ಉಪವಾಸ ಬೀಳುವಂಥ ವ್ಯವಸ್ಥೆಗೆ ಬಂತು, ಅದರ ಹೊಣೆ ತಮ್ಮ ಮೇಲೆ ಬರದಿದ್ದರೂ ಸರ್ಕಾರದ ಆದಕ್ಷತೆಯಿಂದ ಇದೆಲ್ಲಾ ನಡೆಯಿತು. ದುರ್ದೈವದಿಂದ ತಮ್ಮ ಹೆಸರನ್ನು ತೆಗೆದುಕೊಳ್ಳುವಂಥದ್ದನ್ನು ಈ ಸರ್ಕಾರ ಮಾಡಿತು. ಆದಕ್ಕೋಸ್ಕರವಾಗಿ ಈ ಚರ್ಚೆ ಅತ್ಯಂತ ಅವಶ್ಯಕ. ಈಗ ಕೇಂದ್ರ ಸರ್ಕಾರದ ದೃಷ್ಟಿಯಲ್ಲಿ ರಾಜ್ಯ ಸರ್ಕಾರದ ದೃಷ್ಟಿಯಲ್ಲಿ ಬೆಲೆಗಳು ಹೆಚ್ಚಾಗಿವೆ. ನೀವೇ ಬೆಲೆಯನ್ನು ಹೆಚ್ಚು ಮಾಡಿ ತಿರುಗಿ ಉಪವಾಸ ಮಾಡುತ್ತೇವೆ ಬಂದ್ ಮಾಡುತ್ತೇವೆ ಎಂದರೆ ಇದು ಯಾವ ಧರ್ಮ? ಕೇಂದ್ರ ಸರ್ಕಾರದ ಮೇಲೆ ಆಗಿದ್ದರೆ ಆ ಮಾತು ಬೇರೆ ಇತ್ತು. ಮಾನ್ಯ ಕೃಷ್ಣನ್‌ರವರು ಈ ಮಾತನ್ನು ಒಪ್ಪುವುದಿಲ್ಲ. ಇದಕ್ಕೆ ಕೇಂದ್ರ ಸರ್ಕಾರವೂ ಕಾರಣವಾಗಿದೆ, ರಾಜ್ಯ ಸರ್ಕಾರವೂ ಕಾರಣವಾಗಿದೆ. ಹೀಗಾಗಿ ನಾನೇ ಮಾಡಿ ನಾನೇ ತಿರುಗಿ ಬಂದ್ ಮಾಡುತ್ತೇನೆ ಎಂದರೆ ಇದೊಂದು ದ್ವಂದ್ವ ಯುದ್ಧವಾಗುತ್ತದೆ ಯಾವ ಜನರು ಇಪತ್ತು ಆಡಳಿತವನ್ನು ವಹಿಸಿಕೊಂಡು ಸಾಮಾನ್ಯ ಜನತೆಗೆ ನ್ಯಾಯ ರಕ್ಷಣೆ ಕೊಡಬೇಕೋ ಅಂಥವರು ಈ ಬಂದನ್ನು ಮಾಡಲಿಕ್ಕೆ ಹತ್ತಿದರೆ ನಾಳೆ ಈ ಬಂದ್ ಯಾವ ಮಟ್ಟಿಗೆ ವರಂಟಿಬತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಅನೇಕ ರಸ್ತೆಗಳಲ್ಲಿ ನೋಡಿದ್ದೇವೆ. ಆದರೆ ಎಲ್ಲೆಲ್ಲಿ ಸರ್ಕಾರದ ವರ್ಚಸ್ಸು ಇದೆ ಅವರು ಮಾತ್ರ ಬಂದ್ ಮಾಡಿದರು. ಇದೇನಾದರೂ ವಿಕೋಪಕ್ಕೆ ಹೋಗಿದ್ದರೆ ಲಾ ಅಂಡ್ ಆರ್ಡರ್ ಸಿಚುಯೇಷನ್ ತಲೆಯೆತ್ತಿ ಸಜ್ಜನರಿಗೆ ತೊಂದರೆಯಾಗುತ್ತಿತ್ತು. ಕ್ರಮಬದ್ಧವಾದಂತಹ ಈ ಸದನ ಇಂಥ ವಿಷಯವನ್ನು ವಿಚಾರ ಮಾಡುವುದು ಅತ್ಯಂತ ಅವಶ್ಯಕವಾಗಿದೆ. ಉಳಿದ ರೀತಿಯಲ್ಲಿ ನಿಮಗೆ ತೊಂದರೆ ಕೊಡಬೇಕೆಂದು ನಾನು ಇಚ್ಛಿ

ಪಡುವದಿಲ್ಲ. ನಿಯಮಾವಳಿಯ ಪರವಾಗಿ ನಾವು ಎಲ್ಲಾ ಸಾಧನೆಯನ್ನು ಮಾಡಿರುವಾಗ ತಾವು ಈ ವಿಷಯವನ್ನು ವಿಚಾರ ಮಾಡಲಿಕ್ಕೆ ಅವಕಾಶ ಕೊಡಬೇಕು ಎಂದು ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮುಂದೆ ಆಗಬಹುದಾದಂಥ ಅನಾಹುತಗಳನ್ನು ತಪ್ಪಿಸುವುದಕ್ಕೆ ಮತ್ತು ಸರ್ಕಾರವು ಈಗ ಮಾಡಿರುವಂಥ ತಪ್ಪನ್ನು ಅವರೇ ತಮ್ಮ ಕನ್ನಡಿಯಲ್ಲಿ ನೋಡಿಕೊಳ್ಳುವ ಸಲುವಾಗಿ ನಾವು ಈ ಒಂದು ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸನ್ಮಾನ್ಯ ಅಧ್ಯಕ್ಷರೇ.....

ಶ್ರೀ ಎ. ಲಕ್ಷ್ಮೀಸಾಗರ್.—ಈ ರೀತಿ ನಿಲುವಳಿ ಸೂಚನೆಗಳನ್ನು ಮತ್ತು ಇದಕ್ಕೆ ಸಂಬಂಧಪಟ್ಟಂತೆ ನೋಟೀಸ್‌ಗಳನ್ನು ಕೊಡತಕ್ಕಂಥದ್ದು ಇವರಿಗೆ ಒಂದು ಅಭ್ಯಾಸವಾಗಿದೆ. ಮತ್ತು ಇದು ದಿನಪಹಿ ಕಾರ್ಯವಾಗಿ ಹೋಗಿದೆ. ಇದು ಸಾರ್ವಜನಿಕರಿಗೆ ಸಂಬಂಧಪಟ್ಟ ವಿಷಯವಾಗಿರಬಹುದು, ಇಲ್ಲಿ ಯಾವ ವಿಷಯವನ್ನು ಪ್ರಸ್ತಾಪ ಮಾಡಿದರೂ ಅದು ಒಂದಲ್ಲ ಒಂದು ರೀತಿಯಲ್ಲಿ ನೇರವಾಗಿ ಸಾರ್ವಜನಿಕರಿಗೆ ಸಂಬಂಧ ಇರಬಹುದು ಅಥವಾ ಅಪ್ರತ್ಯಕ್ಷವಾಗಿ ಇರಬಹುದು. ಈ ಪ್ರಪಂಚದಲ್ಲಿ ನಡೆಯತಕ್ಕಂಥ ವಿಷಯಗಳು ಒಂದಲ್ಲ ಒಂದು ರೀತಿಯಲ್ಲಿ ಸಮಾಜಕ್ಕೆ ಹಾಗೂ ವ್ಯಕ್ತಿಗೆ ಸಂಬಂಧಪಟ್ಟ ವಿಷಯಗಳು ಆಗಿರುತ್ತವೆ. ಹಾಗಿಲ್ಲದೇ ಯಾವ ವಿಚಾರವೂ ಸಮಾಜದಲ್ಲಿ ನಡೆಯುವುದಕ್ಕೆ ಸಾಧ್ಯವಿಲ್ಲ. ಹೀಗಾಗಿ ನಾನು ದಿನವೂ ನೋಡುತ್ತಿದ್ದೇನೆ. ನಾನು ೧೯೭೮ ರಿಂದ ಈ ಸಭೆಯ ಸದಸ್ಯನಾಗಿದ್ದೇನೆ, ವಿರೋಧ ಪಕ್ಷದಲ್ಲೂ ಕೂಡ ಇದು ನಾನು ಕೆಲಸ ಮಾಡಿದ್ದೇನೆ. ಸನ್ಮಾನ್ಯ ಶ್ರೀನಿವಾಸ್‌ರವರೂ ಎರಡೂ ಕಡೆ ಕೂತು ಕೆಲಸ ಮಾಡಿದ್ದಾರೆ. ಎದ್ದರೆ ನಿಲುವಳಿ ಸೂಚನೆ, ಕೂತರೆ ನಿಲುವಳಿ ಸೂಚನೆ. ಸುಮ್ಮನೆ ಇದ್ದರೆ ನಿಲುವಳಿ ಸೂಚನೆ, ಮಾತನಾಡಿದರೆ ನಿಲುವಳಿ ಸೂಚನೆ ಎಂದರೆ ಇದಕ್ಕೆ ಏನು ಬೆಲೆ ? ಇದಕ್ಕೆ ಏನು ಬೆಲೆ ಉಳಿದಿದೆ ಇದನ್ನು ನೋಡಿ ನನಗೆ ಆಶ್ಚರ್ಯವಾಗುತ್ತಿದೆ.

ಶ್ರೀ ಕೆ.ಹೆಚ್. ಪಾಟೀಲ್. — ತಾವು ಪಾರ್ಲಿಮೆಂಟ್‌ರಿ ಸಚಿವರಾಗಿ ಈ ರೀತಿಯಾಗಿ ಹೇಳಬಾರದು ಇದನ್ನು ಯಾವಾಗ ತರುತ್ತೇವೆಂದರೆ ತಾವು ಯಾವಾಗ ಕರ್ತವ್ಯ ಚ್ಯುತಿ ಮಾಡುತ್ತೀರಿ, ಆಗ ನಾವು ಇದನ್ನು ತರ ಬೇಕಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಕರ್ತವ್ಯಚ್ಯುತಿ ಆಗಿದ್ದರೆ ಆಡಳಿತದಲ್ಲಿ ಲೋಪದೋಷ ಆಗಿದ್ದರೆ ಅದನ್ನು ಸರ್ಕಾರದ ಗಮನಕ್ಕೆ ತರುವುದಕ್ಕೂ ಮತ್ತು ಸರಿಪಡಿಸುವುದಕ್ಕೂ ಬೇರೆ ವಿಧಾನಗಳಿವೆ. ಇದು ನಿಲುವಳಿ ಸೂಚನೆಯಾಗುವುದಿಲ್ಲ. ಇದಕ್ಕೆ ಬಲವಾದ ಕಾರಣ ಇಷ್ಟೆ. ಇದು ಕಾನೂನು ವ್ಯವಸ್ಥೆಗೆ ಸಂಬಂಧಪಟ್ಟ ಲಾ ಅಂಡ್ ಆರ್ಡರ್ ಸಿಚುಯೇಷನ್. ಈ ಸಭೆಯಲ್ಲಿ ೫೮ನೇ ಇಸವಿಯಿಂದ ಇಲ್ಲಿಯವರೆಗೂ ತಾವು ಹಿಂದಿನ ಪುರಾವೆಗಳನ್ನು ನೋಡಿದ್ದೀರಿ ಆದರೆ ಕಾನೂನು ಆಡಳಿತ ವ್ಯವಸ್ಥೆಗೆ ಸಂಬಂಧಪಟ್ಟ ವಿಷಯಗಳು ನಿಲುವಳಿ ಸೂಚನೆಗೆ ಬರುವುದಿಲ್ಲ ಎಂದು ಹೇಳುವ ಉದಾಹರಣೆಗಳು ನಿಮಗೆ ಹತ್ತಾರು ಅಲ್ಲ, ನೂರಾರು ಸಿಗುತ್ತವೆ. ಈ ಒಂದು ಕಾರಣಕ್ಕೋಸ್ಕರ ಇದು ನಿಲುವಳಿ ಸೂಚನೆಯಲ್ಲಿ ಬರುವುದಿಲ್ಲ. ಕೊನೆಯ ವಿಷಯವನ್ನು ಪ್ರಸ್ತಾಪ ಮಾಡಿದಂಥ ಸನ್ಮಾನ್ಯ ಪಾಟೀಲರು ಸರ್ಕಾರದ ನೇರ ಬೆಂಬಲದಿಂದ ಬಂದ್ ಆಗಿದೆ ಎನ್ನುವುದನ್ನು ನಾನು ಸಂಪೂರ್ಣವಾಗಿ ತಳ್ಳಿಹಾಕುತ್ತೇನೆ. ಸರ್ಕಾರ ಇದರಲ್ಲಿ ನೇರವಾಗಿಯೂ ಪ್ರವೇಶ ಮಾಡಿಲ್ಲ. ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿಯೂ ಪ್ರವೇಶ ಮಾಡಿಲ್ಲ. ಇದು ಅವರ ಕಲ್ಪನೆ ಹಾಗೂ ಅವರ ಕಲ್ಪನೆಗೆ ಸಂಬಂಧಪಟ್ಟಿದ್ದು ಮತ್ತು ಅವರ ಮನಸ್ಸಿಗೆ ಸಂಬಂಧಪಟ್ಟಿದ್ದು. ಸರ್ಕಾರದಲ್ಲಿ ವಿನಾದನೂ ಆದರೆ ಜನತಾಪಕ್ಷ ಅದರಲ್ಲಿ ಸೇರಿದೆ ಎಂದು ಪದೇ ಪದೇ ಇಲ್ಲಿ ಹೇಳುತ್ತಾರೆ. ಅವರ ಮನಸ್ಸಿನಲ್ಲಿ ಹಾಗೂ ಅವರ ಕಿವಿಯಲ್ಲಿ ಇದೇ ಗುಂಗಾಗಿ ಬಿಟ್ಟಿದೆ. ಇದಕ್ಕೆ ನಾನು ಏನು ಮಾಡಲಿಕ್ಕೆ ಆಗುತ್ತದೆ. ಸರ್ಕಾರಕ್ಕೂ ಬಂದ್‌ಗೂ ಸಂಬಂಧ ಇಲ್ಲ. ಜನರು ನೇರವಾಗಿ ಸ್ವಯಂಪ್ರೇರಿತರಾಗಿ, ಸ್ವಯಂ ಇಚ್ಛೆಯಿಂದ ಅವರಿಗೆ ಆಗತಕ್ಕಂಥ ಅನ್ಯಾಯಗಳ ವಿರುದ್ಧ ಶಾಂತರೀತಿಯಿಂದ ಕಾನೂನುಬದ್ಧವಾಗಿ ಬಂದನ್ನು ಆಚರಿಸಿದರೆ ನಾವು ಅಡ್ಡಿ ಮಾಡಲಿಕ್ಕೆ ಬರುವುದಿಲ್ಲ. ಹಿಂದೆ ಬಂದ್ ಆದಾಗ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಅವರ ಪಕ್ಷದವರು ಬಂದ್‌ಗೆ ಕರೆ ನೀಡಿದರು. ಆಗ ನಾವು ಇದರ ಬಗ್ಗೆ ಏನು ಹೇಳಲಿಲ್ಲವಲ್ಲ. ಬಂದ್ ಮಾಡಬೇಡಿ ಎಂದು ಪಾತ್ರ ಹೇಳಿದೆವೆ.

ನೀವು ಧರಣಿ ಮಾಡಿದಾಗ ನಾವು ಬೇಡವೆಂದು ಹೇಳಲಿಲ್ಲ. ಏಕೆಂದರೆ ಹಿಂದೆ ಧರಣಿಯನ್ನು ನಾವೂ ಮಾಡಿದ್ದೇವೆ. ಇದು ನಿಲುವಳಿ ಸೂಚನೆಯಲ್ಲಿ ಬರುವುದಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಧರಣಿ ಬಗ್ಗೆ ಹೇಳಲಿಲ್ಲ. ಬಂದ್‌ನ ಸಮಯದಲ್ಲಿ ಸರ್ಕಾರ ತನ್ನ ಕರ್ತವ್ಯದಲ್ಲಿ ಲೋಪ ಮಾಡಿ ಜನರಿಗೆ ಕೊಡಬೇಕಾದಂತಹ ಸೌಕರ್ಯಗಳನ್ನು ಕೊಡುವುದಕ್ಕೆ ತಪ್ಪಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ರೀತಿ ಸಾರ್ವಜನಿಕ ವಿಷಯಂಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ವಿರೋಧವನ್ನು ವ್ಯಕ್ತಪಡಿಸತಕ್ಕಂಥಾದ್ದಕ್ಕೆ, ಚಳುವಳಿ ಮಾಡತಕ್ಕಂಥಾದ್ದಕ್ಕೆ, ಹಾಗೂ ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡತಕ್ಕಂಥಾದ್ದಕ್ಕೆ ನನ್ನ ವಿರೋಧವಿಲ್ಲ ಹಿಂದೆ ನಾವು ಕೂಡ ಇದನ್ನೇ ಮಾಡುತ್ತಿದ್ದೆವು. ಹಾಗೂ ಮಾಡಿದ್ದೇವೆ. ಆದರೆ ಇದು ನಿಲುವಳಿ ಸೂಚನೆಗೆ ಬರುವುದಿಲ್ಲ. ಇದರಲ್ಲಿ ಸರ್ಕಾರದ ನೇರ ಪ್ರವೇಶ ಹಾಗೂ ಪ್ರಚೋದನೆಯಿದೆಯೆಂದು ಮಾನ್ಯ ಕೆ. ಹೆಚ್ ಪಾಟೀಲರ ಕೈಯಲ್ಲಿ ಹೇಳಿಸಿದ್ದಾರೆ. ಆದರೆ ಅವರಿಗೆ ಎಲ್ಲಾ ಗೊತ್ತಿದೆ. ಆದರೂ ಅವರು ಏನೋ ಹೇಳಬೇಕೆಂದು ಹೇಳಿದ್ದಾರೆ.

ಶ್ರೀ ಕೆ. ಹೆಚ್. ಪಾಟೀಲ್.—ನನಗೆ ಗೊತ್ತಿದೆ. ಯಾವ ಮಂತ್ರಿ ಸಹ ಪೋಲೀಸ್ ಇಟ್ಟು ಕೊಂಡು ಅಧಿಕಾರ ಮಾಡಿಲ್ಲ. ಹೋಮ್ ಮಿನಿಸ್ಟರ್‌ರವರು.....

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಕೆ. ಹೆಚ್. ಪಾಟೀಲರು ಮಂತ್ರಿಯಾಗಿದ್ದಾಗ ಪೋಲೀಸರು ಏನು ಕೆಲಸ ಮಾಡುತ್ತಿದ್ದರೋ ಅದೇ ಕೆಲಸ ಇವತ್ತು ಮಾಡುತ್ತಿದ್ದಾರೆ. ನಾಳೆಯೂ ಅದೇ ಮಾಡುತ್ತಾರೆ. ಅದರ ಬಗ್ಗೆ ಪ್ರಸ್ತಾಪ ಮಾಡಿ ಪ್ರಯೋಜನವಿಲ್ಲ. ಇದನ್ನು ತಾವು ಮೊದಲೇ ತಳ್ಳಿ ಹಾಕಬೇಕಾಗಿತ್ತೆಂದು ನನ್ನ ಅಭಿಪ್ರಾಯ. ಕೆಲವು ಸಮಯದಲ್ಲಿ ನಿಲುವಳಿ ಸೂಚನೆಯು ಅರ್ಧ ಭಾಗ ಹಾಗೆ ಇರಬಹುದು, ಅರ್ಧ ಭಾಗ ಹೀಗೆ ಇರಬಹುದು. ಕೆಲವು ಸಮಯದಲ್ಲಿ ಪೂರ್ವಭಾವಿ ಯಾದಂತಹ, ಸಮರ್ಥನೀಯವಾದಂತಹ ವಾದವನ್ನು ತಮ್ಮ ಮುಂದಿಟ್ಟಿದ್ದಾರೆ. ಆಗ ಆದಕ್ಕೆಲ್ಲಾ ತಾವು ಅವಕಾಶವನ್ನು ಕೊಡುತ್ತಾ ಬಂದಿದ್ದೀರಿ. ಆದರೆ ಈ ವಿಷಯವಂತೂ ನಿಲುವಳಿ ಸೂಚನೆಯಲ್ಲಿ ಬರುವುದಿಲ್ಲ. ಇದನ್ನು ತಮ್ಮ ಕೋಣೆಯೊಳಗೇ ನಿರಾಕರಣೆ ಮಾಡಬೇಕಿತ್ತು.

ಶ್ರೀ ಕೆ. ಹೆಚ್. ಶ್ರೀನಿವಾಸ್ —ಮಾನ್ಯ ಅಧ್ಯಕ್ಷರೆ, ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ನಾವು ತಂದಿರತಕ್ಕಂತಹ ನಿಲುವಳಿ ಸೂಚನೆಯ ಬಗ್ಗೆ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈಗ ಅವರು ಸದನದಿಂದ ಹೊರಗೆ ಹೋಗಿ ಬಿಟ್ಟರು ಅವರು ಹಿಂದೆ ಇಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದಾಗ, ನಾನು ಉಪ ನಾಯಕನಾಗಿದ್ದೆ. ಅವರು ಈ ಸದನಕ್ಕೆ ಬರುವುದಕ್ಕಿಂತ ಹ ವರ್ಷ ಮುಂಚೆಯಿಂದ ನಾನು ಇಲ್ಲಿ ಸದಸ್ಯನಾಗಿದ್ದೇನೆ. ನಾನು ಆ ಕಡೆಯೂ ಇದ್ದೆ, ಈ ಕಡೆಯೂ ಇದ್ದೆ ಆ ಎಲ್ಲಾ ಸಂದರ್ಭಗಳಲ್ಲಿಯೂ ಅಂದರೆ ನಾನು ಈ ಕಡೆ ಇದ್ದಾಗ, ಸರ್ಕಾರದ ಜವಾಬ್ದಾರಿಗಳನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡು, ಹಾಗೂ ಸರ್ಕಾರದ ಕಡೆ ಇದ್ದಾಗ ವಿರೋಧ ಪಕ್ಷದವರ ಕಳಕಳಿಯನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡು ವ್ಯವಹರಿಸಿದ್ದೇನೆಯೇ ಹೊರತು ಮಾನ್ಯ ಲಕ್ಷ್ಮೀಸಾಗರ್ ತರಹ ಅಲ್ಲಿ ಒಂದು ಶೈತಿ, ಇಲ್ಲಿ ಒಂದು ಶೈತಿ ತರಹ ಮಾಡಲಿಲ್ಲ. ಈ ನಿಲುವಳಿ ಸೂಚನೆಯನ್ನು ಏಕೆ ತರುತ್ತೇವೆಂದರೆ, ಎಲ್ಲಿ ಸರ್ಕಾರದ ನೇರ ಜವಾಬ್ದಾರಿಯ ಪ್ರಶ್ನೆ ಬರುತ್ತದೆ ಅಲ್ಲಿ ತರುತ್ತೇವೆಯೇ ಹೊರತು ಉಳಿದ ಎಲ್ಲಾ ವಿಷಯಗಳಿಗೂ ತರುವುದಿಲ್ಲ. ಇದನ್ನು ಲಘುವಾಗಿ ಉಪಯೋಗಿಸುತ್ತಿದ್ದೇವೆಯೆನ್ನುವ ರೀತಿಯಲ್ಲಿ ಹಾಗೂ ಲಘುವಾಗಿ ವರ್ತನೆ ಮಾಡಿದ್ದೇವೆಂದು ಮಾನ್ಯ ಸಚಿವರು ಹೇಳಿದರು. ಏಕೋ ಇವತ್ತು ಅವರು ಸರಿಯಾದ ಮೂಡಿನಲ್ಲಿ ಇಲ್ಲ. ಅವರಿಗೆ ಸ್ವಲ್ಪ ಬಿ. ಪಿ. ಹೆಚ್ಚಾ ಕಡಿವೇ ಆಗಿದೆಯೋ ಏನೋ ? ಅವರು ಸಾಧಾರಣವಾಗಿ ಆಗ್ಯುಮೆಂಟ್ ಮಾಡುತ್ತಾರೆ. ಈ ತರ ತಾಳ್ಮೆ ಕಡಿದು ಕೊಳ್ಳುವುದಿಲ್ಲ. ನಾವು ಹೇಳುವುದಿಷ್ಟೇ. ನಾವು ಈ ಬಂದ್‌ನ ಬಗ್ಗೆ ನಮ್ಮ ಅಭಿಪ್ರಾಯವನ್ನು ಹೇಳಿದ್ದೇವೆ. ಇದರ ಬಗ್ಗೆ ಸರ್ಕಾರದ ನಿಲುವು ಏನು ಎಂದು ಹಿಂದೆ ಕೇಳಿದ್ದೆವು. ಮಾನ್ಯ ಮುಖ್ಯ ಮಂತ್ರಿಗಳು ಇದಕ್ಕೆ ಸರ್ಕಾರದ ಬೆಂಬಲವಿಲ್ಲವೆಂದು ಹೇಳಿದರು. ಮಾನ್ಯ ದೇವೇಗೌಡರೂ ಸಹ ಸರ್ಕಾರದ ಬೆಂಬಲವಿಲ್ಲವೆಂದು ಹೇಳಿದರು. ಬಂದ್ ನಿನ್ನೆ ನಡೆದಿದೆ. ನಮ್ಮದೂ ಬಂದ್‌ಗೆ ಬೆಂಬಲ ವಿದೆಯೆಂದು ಸರ್ಕಾರ ಹೇಳಿಕೊಂಡು ಬಿಟ್ಟಿದ್ದರೆ, ಅದು ಬೇರೆಯಾಗುತ್ತಿತ್ತು. ಈ ಬಗ್ಗೆ ನಮ್ಮ ಅಭಿಪ್ರಾಯವೇನಾದರೂ ಇರಲಿ, ಅದು ಬೇರೆ ವಿಚಾರ. ಅವರ ಪ್ರಾಮಾಣಿಕತೆ ಬಗ್ಗೆ ನಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದೆವು ಅವರಿಗೆ ಇಕ್ಕಟ್ಟು ಇರಬಹುದು. ಅವರ ಪಕ್ಷ ಇಲ್ಲಿ ಅಡಳಿತ ಮಾಡು

ತ್ತಿದ್ದು. ಅಖಿಲ ಭಾರತ ಮಟ್ಟದಲ್ಲಿ ವಿರೋಧ ಪಕ್ಷವಾಗಿ ಕೆಲಸ ಮಾಡುತ್ತಿದೆ. ಆಲ್ಲಿ ಅವರ ಪಕ್ಷ ಈ ಬಂದ್‌ಗೆ ಸಹಕರಿಸಬೇಕೆಂದು ನಿರ್ಣಯ ತೆಗೆದುಕೊಂಡಿದೆ. ಈ ಬಂದ್‌ನ್ನು ನಾವೂ ಸಹ ಆಚರಣೆಗೆ ತರುತ್ತೇವೆಂದು ಹೇಳಿದ್ದರೆ, ಅದು ಬೇರೆ ವಿಚಾರವಾಗುತ್ತಿತ್ತು. ಅದು ಸರಿಯೋ ತಪ್ಪೊ ಎಂಬುದನ್ನು ಜನರೇ ತೀರ್ಮಾನ ಮಾಡಂತಿದ್ದರು ಆದರೆ.ಈ ಬಂದ್‌ಗೆ ಸರ್ಕಾರದ ಬೆಂಬಲವಿಲ್ಲವೆಂದು ನಮಗೆ ತಪ್ಪು ಸಂಪೂರ್ಣವಾಗಿ ತಿಳುವಳಿಕೆಯನ್ನು ಕೊಟ್ಟರು. ಅಂದರೆ ಅದರ ಅರ್ಥವೇನು ? ಯಾರ್ಯಾರು ಸಹಜವಾಗಿ ತಮ್ಮ ತಮ್ಮ ಕರ್ತವ್ಯಗಳಲ್ಲಿ ತೊಡಗುತ್ತಾರೆ ಅವರೆಲ್ಲರಿಗೂ ಕೂಡ ಅವರವರ ಕರ್ತವ್ಯ ಮಾಡುವುದಕ್ಕೆ ಸರ್ಕಾರ ತನ್ನ ರಕ್ಷಣೆಯನ್ನು ಕೊಡಬೇಕು. ಬೆಂಬಲವಿಲ್ಲವೆಂದು ಹೇಳಿಬಿಟ್ಟರಿ, ಅಷ್ಟರಿಂದಲೇ ತನ್ನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಸರ್ಕಾರದ ಜವಾಬ್ದಾರಿಯಿಲ್ಲವೆಂದರೆ, ದಿನ ನಿತ್ಯದ ಕರ್ತವ್ಯವನ್ನು, ತನ್ನ ದೈನಂದಿನ ಕರ್ತವ್ಯವನ್ನು ಪ್ರತಿಯೊಬ್ಬನೂ ನಿರ್ವಹಿಸುವುದಕ್ಕೆ ನಿರತ ಕ್ಕಂತಹ ಹಕ್ಕಿಗೆ ರಕ್ಷಣೆ ಮಾಡಿಕೊಟ್ಟಿದೆಯೆಂದು ಅರ್ಥವಾಗುತ್ತದೆ ಬಂದ್ ದಿನ ವಿಧಾನ ಸೌಧಕ್ಕೆ ಬೀಗ ಹಾಕಿದೆ ತಾವು ಅಸೆಂಬ್ಲಿಗೆ ರಜಾ ಕೊಟ್ಟರಿ ಅದು ಬೇರೆ ವಿಚಾರ. ಆ ನಂತರ ಹೊರಗಡೆ ಎಲ್ಲಿ ಹೋದರೂ, ಎಲ್ಲಿ ನೋಡಿದರು ಇದು ಒಂದು ಸರ್ಕಾರದ ಅಧಿಕೃತವಾದಂತಹ ಮುದ್ರೆಯಿರುವ ಬಂದ್ ಎಂದು ಅನ್ನಿಸಿತೇ ಹೊರತು ಜನರು ಸ್ವಯಂ ಪ್ರೇರಣೆಯಿಂದ ಮಾಡಿಲ್ಲ. ಸತ್ಯ ಹೇಳಬೇಕಾದರೆ ಜನರು ಇಷ್ಟು ಲಘುವಾಗಿ ಬಂದ್‌ನ ಬಗ್ಗೆ ವರ್ತನೆ ಮಾಡುವುದಕ್ಕೆ ಸಿದ್ಧರಿಲ್ಲ, ನಾವು ಹೇಳಿದರೂ, ನೀವು ಹೇಳಿದರೂ ಜನರ ಹತ್ತಿರ ಸೈಸಿಕೊಳ್ಳುತ್ತೇವೆ ಅದರ ಆಧಾರದ ಮೇಲೆ ಜನ ತೀರ್ಮಾನ ಮಾಡುವುದಿಲ್ಲ ನಿಜವಾಗಿಯೂ ಜನಗಳ ತಲೆ ಕೆಟ್ಟರೆ ಅದು ಪ್ರಾರಂಭವಾಗುತ್ತದೆ. ನಾವೇ ಕೆಡಿಸುವುದಕ್ಕೆ ಹೋದರೆ ಕೆಡಿಸಿಕೊಳ್ಳುವುದಕ್ಕೆ ಜನ ತಯಾರಿಲ್ಲ. ಇದರ ಸಂಚಾಲಕರೇನಿದ್ದಾರೆ, ಅವರು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳಬೇಕೇ ಹೊರತು ಬೇರೆ ಯಾರು ತಟ್ಟುವುದಿಲ್ಲ. ಇವತ್ತು ನಾವು ಜನಗಳನ್ನು ನಿಜವಾಗಿಯೂ ಅಭಿನಂದಿಸಬೇಕಾಗಿದೆ ಈ ಬಂದ್‌ನ್ನು ಕೇವಲ ಲಘುವಾಗಿಟ್ಟುಕೊಂಡು ಬೇಕಾದಷ್ಟು ಜನ ತಮ್ಮ ಕರ್ತವ್ಯವನ್ನು ಮಾಡುವುದಕ್ಕೆ ನಿನ್ನೆ ಬೆಳಿಗ್ಗೆಯಿಂದ, ಬೆಂಗಳೂರಿನಲ್ಲೂ ಕೂಡ ಪ್ರಯತ್ನ ಪಟ್ಟಿದ್ದಾರೆ. ಆದರೆ ಜನಕ್ಕೆ ಎಲ್ಲಿ ಭಯ ಬಂತೆಂದರೆ, ಸರ್ಕಾರದವರು ತಮ್ಮ ಕರ್ತವ್ಯ ಮಾಡದೇ.....

ಶ್ರೀ ವೇದಾಂತ ಹೆಮ್ಮಿಗೆ.—ಹಾಗಾದರೆ ಪೇಪರ್‌ನಲ್ಲಿ ಬಂದಿರುವುದು ಸುಳ್ಳೇ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಪೋಲೀಸ್‌ನವರು ಎಲ್ಲಾ ಕಡೆ ಬಂದ್ ಮಾಡುವ ಹೊತ್ತಿಗೆ ಜನ ತಮ್ಮ ಕರ್ತವ್ಯವನ್ನು ಧೈರ್ಯವಾಗಿ ನಿರ್ವಹಿಸುವುದಕ್ಕೆ ಆತಂಕ ಉಂಟಾಗಿದ್ದು. ಸರ್ಕಾರದವರು ಈ ರೀತಿಯ ಇಬ್ಬಗೆಯ ನೀತಿಯನ್ನು ಅನುಸರಿಸಬಾರದಿತ್ತು ಸರ್ಕಾರದ ಬೆಂಬಲವಿಲ್ಲವೆಂದು ಹೇಳಿ ನಂತರ ನೇರವಾಗಿ ಬೆಂಬಲವನ್ನು ಕೊಟ್ಟರುವಂಥಾದ್ದು ಸರಿಯಲ್ಲ. ಇಲ್ಲಿ ನಮಗೆ ತಪ್ಪು ತಿಳುವಳಿಕೆ ಕೊಡುವ ಆಗತ್ಯವಿಲ್ಲ ಸಾಮಾನಿಕತೆಯಿಂದ ನಾವೂ ಅವರ ಜೊತೆಯಲ್ಲಿದ್ದೇವೆಂದು ಹೇಳಿದ್ದರೆ ಏನು ತೊಂದರೆಯಿರುತ್ತಿತ್ತು. ಆದರ ಬಗ್ಗೆ ನಮ್ಮ ನಿಲುವು ಏನಿದೆಯೋ ಅದನ್ನು ತೆಗೆದುಕೊಳ್ಳುತ್ತಿದ್ದೆವು ಸರ್ಕಾರದ ಬೆಂಬಲವಿಲ್ಲವೆಂದು ಹೇಳಿ ಎಲ್ಲಾ ಕಡೆಗೂ ಪೋಲೀಸರನ್ನು ಕಳಿಸಿ ಬೀಗ ಹಾಕಿಸತಕ್ಕಂಥಾದ್ದು ನಿಮ್ಮ ಸರ್ಕಾರಕ್ಕೆ ಭೂಷಣ ತರತಕ್ಕಂಥಾದ್ದು ಖಂಡಿತವಾಗಿಯೂ ಅಲ್ಲ. ಇದರ ಬಗ್ಗೆ ಉತ್ತರ ಕೊಡ ತಕ್ಕಂಥಾ ಜವಾಬ್ದಾರಿ ಸರ್ಕಾರದ್ದಿದೆ. ಆದ್ದರಿಂದ ತಾವು ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಎಂ. ಎಸ್. ಪಾಟೀಲ್.—ನನಗೆ ತಾವು ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ಇವಕ್ಕೆ ಎಷ್ಟರ ಮಟ್ಟಿಗೆ ಅವಕಾಶ ಕೊಡಬೇಕೋ ಅಷ್ಟನ್ನು ಕೊಟ್ಟಿದ್ದೇನೆ.

೩ ಪಿ, ಎಂ

ಶ್ರೀ ಬಿ. ರಾಚಯ್ಯ (ಗೃಹಸಚಿವರು).— ಮಾನ್ಯ ಅಧ್ಯಕ್ಷರೇ, ಬಹುಶಃ ನಿಯಮಾವಳಿ ಪ್ರಕಾರ ಇತ್ತೀಚೆಗೆ ನಡೆದ ಘಟನೆ ಹಾಗೂ ಸಾರ್ವಜನಿಕ ದೃಷ್ಟಿಯಿಂದ ಮಹತ್ವದ್ದು ಎಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ ತಾವು ಈ ಸದನವನ್ನು ಪೊಸ್ಟ್ ಮುಂದೂಡುವಾಗ ಈ ವಿಷಯ ಪ್ರಸ್ತಾವಕ್ಕೆ ಬಂದಿತ್ತು. ಆದ್ದರಿಂದ ಇದೇನೂ ಹೊಸದಲ್ಲ ಈಗಾಗಲೇ ಈ ಸದನದಲ್ಲಿ ಈ ವಿಷಯ ಚರ್ಚೆಯಾಗಿದೆ. ಸರ್ಕಾರ ಇವಕ್ಕೆ ಪರೋಕ್ಷವಾಗಿ ಬೆಂಬಲ ಕೊಟ್ಟಿದೆ. ಹಾಗೂ ಪೋಲೀಸಿನವರನ್ನು ಕಳುಹಿಸಿ ಎಲ್ಲಾ ಅಸ್ಪತ್ರೆಗಳನ್ನು, ಪೆಟ್ರೋಲ್ ಬಂಕ್‌ಗಳನ್ನು ಷಾಪುಗಳನ್ನು ಮುಚ್ಚಿಸಿದ್ದಾರೆಂದು ಮಾನ್ಯ ವಿರೋಧ

ಪಕ್ಷದವರು ಹೇಳಿದ್ದಾರೆ. ಸ್ವಾಮಿ, ನಾನು ಕೂಡಲೆನ್ನೆ ದಿನ ಎಲ್ಲಾಕಡೆ ಸುತ್ತಿದ್ದೇನೆ. ಆರೀತಿ ಯಾದಂಥ ಕಾರ್ಯ ಎಲ್ಲೂ ಆಗಿಲ್ಲ. ಇವತ್ತು ಪ್ರಧಾನ ಸೌಧದ ಅಂದರೆ ನಿಮ್ಮ ಆಲಾಪಿಯ ಸಿಬ್ಬಂದಿ ಯವರೇ ಪೋಲೀಸು ಅಧಿಕಾರಿಗಳು ತೊಂದರೆ ಕೊಟ್ಟಿದ್ದಾರೆಂದು ಚಳುವಳಿ ಮಾಡುತ್ತಿದ್ದಾರೆ. ಇವರು ಪೋಲೀಸಿನವರ ಕರ್ತವ್ಯ ವಿಷಯದಲ್ಲಿ ವಾಕ್ಸನಾಡಿದ್ದಾರೆ, ಇದರಿಂದಲೇ ಪೋಲೀಸಿನವರು ತಮ್ಮ ಕರ್ತವ್ಯ ಚೆನ್ನಾಗಿ ಮಾಡಿದ್ದಾರೆಂದು ಗೊತ್ತಾಗುತ್ತದೆ. ಬಂದಗಳು ಬರುತ್ತವೆ, ಹೋಗುತ್ತವೆ. ನಿನ್ನೆಯ ಬಂದ್ ಬಗ್ಗೆ ಒಂದು ಸಂತೋಷದ ಸುದ್ದಿ ಅಂದರೆ, ಕರ್ನಾಟಕದಲ್ಲಿ ಅಹಿತಕರವಾದ ಘಟನೆ ಎಲ್ಲೂ ನಡೆದಿಲ್ಲ. ಕಾರ್ಮಿಕರಿಗಾಗಲೀ, ವಿದ್ಯಾರ್ಥಿಗಳಿಂದಾಲೀ ಸಾರ್ವಜನಿಕರಿಗಾಗಲೀ ಪೋಲೀಸಿನವರಿಂದ ತೊಂದರೆಯಾದ ಬಗ್ಗೆ ವರದಿ ಬಂದಿಲ್ಲ. ಆದ್ದರಿಂದು ಪೋಲೀಸಿನವರ ಕರ್ತವ್ಯವನ್ನು ಮಾನ್ಯ ಹಿರಿಯ ಸದಸ್ಯರಾದ ಶ್ರೀ ಕೆ. ಹೆಚ್. ಪಾಟೀಲರು ಮೆಚ್ಚುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಈ ನಿಲುವಳಿಸೂಚನೆ ಬಗ್ಗೆ ಸದನದ ಕಾರ್ಯಕಲಾಪಗಳನ್ನು ಮುಂದಕ್ಕೆ ಹಾಕಿ ಇದನ್ನೂ ಚರ್ಚೆ ಮಾಡಬೇಕಾದ್ದು ಏನೂ ಇಲ್ಲ. ಸರ್ಕಾರ ತನ್ನ ಕರ್ತವ್ಯ ಮಾಡಿದೆ. ಸರ್ಕಾರ ಈ ಬಂದ್‌ನಲ್ಲಿ ಭಾಗವಹಿಸಿಲ್ಲ, ಜನತಾ ಪಕ್ಷ ಭಾಗವಹಿಸಿದೆ. ನಾನು ಕೂಡ ನನ್ನ ಕರ್ತವ್ಯವನ್ನು ಚೆನ್ನಾಗಿ ಮಾಡಿದ್ದೇನೆ.

ಒಬ್ಬರು ಮಾನ್ಯ ಸದಸ್ಯರು.— ಬಂದು ಯಶಸ್ವಿಯಾಗಿ ನಡೆಯುವುದಕ್ಕೆ ನೀವು ಸಹಕಾರ ಕೊಟ್ಟಿದ್ದೀರಿ

ಶ್ರೀ ಬಿ. ರಾಚಯ್ಯ.— ಪೋಲೀಸ್ ಅಧಿಕಾರಿಗಳು ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ಎಷ್ಟರಮಟ್ಟಿಗೆ ಸಂಯಮದಿಂದ ನಡೆದುಕೊಂಡಿದ್ದಾರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲದ್ದಕ್ಕೂ ಪೋಲೀಸಿನವರು, ಪೋಲೀಸಿನವರು ಎಂದು ಹೇಳಿ ಅವರನ್ನು ಡೀಮಾರಲೈಜ್ ಮಾಡಿದ್ದಾತ್ತು ಡಕಾಯಿತಿಗೆ, ರಾಬರಿ ಮಾಡತಕ್ಕವರಿಗೆ ಲೈಸೆನ್ಸ್ ಕೊಡುವಂತಾಗಿದೆ. ಈ ವಿಷಯದ ಬಗ್ಗೆ ಎಷ್ಟು ಬೇಕೊ ಅಷ್ಟನ್ನೂ ಮಾತ್ರ ಹೇಳಲಿ. ತಪ್ಪುಗಳಾಗಿದ್ದರೆ ತಿದ್ದಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿ, ಇದನ್ನು ನಾನು ವಿರೋಧಿಸುತ್ತೇನೆ.

ಅಧ್ಯಕ್ಷರು,— ಮಾನ್ಯ ಸದಸ್ಯರಾದ ಪಾಟೀಲರವರ ವಾದವನ್ನು ಕೇಳಿದ್ದೇನೆ. ಕಾನೂನು ಮಂತ್ರಿಗಳು ಹಾಗೂ ಗೃಹ ಜವರಾದ ಶ್ರೀ ರಾಚಯ್ಯನವರ ಹೇಳಿಕೆಯನ್ನು ಕೇಳಿದ್ದೇನೆ. ಆದ್ದರಿಂದ ಈ ನಿಲುವಳಿ ಸೂಚನೆಗೆ ನನ್ನ ಅನುಮತಿಯನ್ನು ನಿರಾಕರಣೆ ಮಾಡಿದ್ದೇನೆ.

ಗಮನ ಸೆಳೆಯಂಥ ಸೂಚನೆ,

ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಯಡಿಯೂರು ಗ್ರಾಮದಲ್ಲಿ ನಡೆದಿರುವ ಘಟನೆ ಬಗ್ಗೆ,

ಶ್ರೀ ಕೆ. ಹೆಚ್. ಪಾಟೀಲ್.— ಸ್ವಾಮಿ, ನಾನು ೩೦-೧೧-೧೯೮೬ ರಂದು ತುಮಕೂರು ಜಿಲ್ಲೆ, ಕುಣಿಗಲ್ ತಾಲ್ಲೂಕು, ಯಡಿಯೂರು ಗ್ರಾಮದಲ್ಲಿ ನಡೆದಿರುವ ಘಟನೆ ಬಗ್ಗೆ ಮಾನ್ಯ ಗೃಹ ಮಂತ್ರಿಯವರ ಗಮನ ಸೆಳೆಯುತ್ತೇನೆ ?

ಶ್ರೀ ಬಿ. ರಾಚಯ್ಯ (ಗೃಹ ಸಚಿವರು). — ಅಧ್ಯಕ್ಷರೇ, ನಾನು ಈ ಹೇಳಿಕೆಯನ್ನು ಮಾಡ ಬಯಸುತ್ತೇನೆ.

ದಿನಾಂಕ ೩೦-೧೧-೧೯೮೬ರ ರಾತ್ರಿ ಸುಮಾರು ೯ ಗಂಟೆ ಸಮಯದಲ್ಲಿ ಶ್ರೀ ಜಿ. ಟಿ. ವೆಂಕಟಸ್ವಾಮಿ ಅವರ ಅನುಯಾಯಿಗಳಾದ ೧೮ ಜನರು ಗುಂಪು ಕಟ್ಟಿ ಕೊಂಡು ಸಿದ್ದಲಿಂಗೇಶ್ವರ ಸ್ವಾಮಿ ಹೋಟೆಲಿಗೆ ಯಡಿಯೂರು ಬಸ್ ಸ್ಟ್ಯಾಂಡಿನಲ್ಲಿರುವ ಸದರಿ ಹೋಟೆಲಿಗೆ ನುಗ್ಗಿ ಕಲ್ಲುಗಳಿಂದ ಹೋಟೆಲಿಗೆ ಹೊಡೆದು ಹೋಟೆಲಿಗೆ ನಷ್ಟ ಉಂಟು ಮಾಡಿ ಹೋಟೆಲು ಮಾಲೀಕ ಬೋರಯ್ಯನವರ ಕಡೆಯವರಿಗೆ ಗಾಯವನ್ನುಂಟು ಮಾಡಿರುತ್ತಾರೆ. ಈ ವಿಚಾರದಲ್ಲಿ ದಿನಾಂಕ ೩೦-೧೧-೧೯೮೬ ರಂದು ಬೀರಗಾನಹಳ್ಳಿ ಗ್ರಾಮದ ಗಂಗ್ರಾಜಿನ್ ಬೋರಯ್ಯ ಎಂಬುವರ ಫಿರ್ಯಾದು ಮೇರೆಗೆ ಅಮೃತೂರು ಠಾಣೆಯಲ್ಲಿ ಮೊದ್ದಿಸಿ ನಂ. ೧೩೬/೮೬ ಕಲಂ ೧೪೩, ೧೪೭, ೪೨೭ರ ಪ್ರಕಾರ ಕೇಸನ್ನು ದಾಖಲು ಮಾಡಿರುತ್ತದೆ. ಮತ್ತು ಇದು ತನಿಖೆಯಲ್ಲಿರುತ್ತದೆ.